<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u> ಶ್ರೀರಂಗಪಟ್ಟಣ.

ಸಿ.ಸಿಃ 106/2016

ಪಿ ಡಬ್ಲ್ಯು 6

ಸಿ. ಡಬ್ಲ್ಯುಃ 6

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಗಿಣಿ ಸ್ವಾಮಿ |
| ತಂದೆ/ಪತಿಯ ಹೆಸರು | ಃ | ಲೇಟ್ ನಂಜೇಗೌಡ |
| ವಯಸ್ಸು | ಃ | 42 ವರ್ಷ |
| ವೃತ್ತಿ | ಃ | ಹಾಲಿನ ಡೈರಿ ಕಾರ್ಯದರ್ಶಿ |
| ವಾಸ | ಃ | ಮಹದೇವಪುರ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ

29.11.2021

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ದಿಃ16.08.2015 ರಲ್ಲಿ ನಿಪಿ 2 ಕ್ಕೆ ನಾನು ಮಹದೇವಪುರ ಅಂಗನವಾಡಿಯಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಪಿ 2 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಸಿ ಎಂದು ಗುರುತಿಸಲಾಯಿತು. ಅಂಗನವಾಡಿಯಲ್ಲಿ ಕಳ್ಳತನ ಆಗಿದ್ದ ವಿಚಾರಕ್ಕೆ ಮಹಜರ್ ಕಾರ್ಯ ಜರುಗಿದ್ದು ನಾನು ಸ್ಥಳದಲ್ಲಿ ಇದ್ದಾಗ ನಿಪಿ 2 ಎಂದು ಮಾಡಲಾಗಿರುತ್ತದೆ. ನಿಪಿ 02 ಬೆಳಿಗ್ಗೆ ಸುಮಾರು 09-30 ಅಥವಾ 10-00 ಸಮಯದಲ್ಲಿ ಆಗಿರಬಹುದು. ನಿಪಿ 2 ಕ್ಕೆ ಕಾಳೇಗೌಡರವರು ಸಹ ಸಹಿ ಮಾಡಿದ್ದಾರೆ.

ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು ನೀಡಲಾಗಿದೆ.

**ಪಾಟಿ ಸವಾಲು ಮಾನ್ಯ ಸಸಅ ರವರಿಂದ**

ಪೋಲೀಸ್ ನವರು ದಿಃ05.08.2015 ರಂದು ಮಹಜರ್ ಮಾಡಲು ಸ್ಥಳಕ್ಕೆ ಬಂದಿದ್ದರು ಎಂದರೆ ನಿಜ. ಆಗ ಸಮಯ 10-30 ಅಂದರೆ ನಿಜ.

**ಪಾಟಿ ಸವಾಲು ಮಾನ್ಯ ಆರೋಪಿ ಪರ ವಕೀಲರಿಂದ**

ನಿಪಿ 2 ಮಹಜರ್ ಕಾಲಕ್ಕೆ ಬರುವಂತೆ ನನಗೆ ಪೋಲೀಸ್ ರವರು ನೋಟಿಸ್ ನೀಡಿಲ್ಲ. ನಿಪಿ 2 ಮಹಜರ್ ನಲ್ಲಿ ಎನು ಬರೆದಿದೆ ಎಂದು ಓದಿ ತಿಳಿದುಕೊಂಡಿದ್ದೇನೆ. ನಿಪಿ 2 ಕ್ಕೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.